ಗದಗ	1010	ಡಿ.ಎಸ್.ಕೊಪ್ಪ	237
ಹಿರೇಕೆರೂರು	148	ಮುಂಡರಗಿ	203
(ಪ್ರಗತಿಯಲ್ಲಿವೆ)		(ಪ್ರಗತಿಯಲ್ಲಿವೆ)	
ನವನಗರ	218	ನಾಗಶೆಟ್ಟಿಕೊಪ್ಪ	164
ಎಂ.ಟಿ.ಎಸ್.ಕಾಲೋನಿ	124	ಕೆಂಪಗಿರಿ	8
ಹುಬ್ಬಳ್ಳಿ		ಧಾರವಾಡ	
ಕೊಪ್ಪ ಟ್ಯಾಂಕ್	39	ಚನ್ನಪೇಟೆ	4
ಧಾರವಾಡ		ಹುಬ್ಬಳ್ಳಿ	
ತೋಪಲಗಟ್ಟಿ	150	ಗೊಪನಕೊಪ್ಪ	49
ಡಿ.ಡಿ.ಪಿ.ಐ. ಕಾಂಪೌಂಡ್	56	ಚಾಣುಕ್ಯಪುರಿ	16
ಧಾರವಾಡ			
ಹೆಗ್ಗೇರಿ ಹುಬ್ಬಳ್ಳಿ	138		

ಆ. -ಇಲ್ಲ-

ಇ. ಉದ್ಭವಿಸುವುದಿಲ್ಲ

ವಿಷಯ : ಮಹಿಳಾ ಮಂಡಲಿ ಕಾರ್ಯದ ಬಗ್ಗೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 727(531)

ಶ್ರೀ ಕೆ.ಎಸ್. ಪುಟ್ಟಣ್ಣಯ್ಯ (ಪಾಂಡವಪುರ) : ಮಾನ್ಯ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ

ಅ. ಮಹಿಳಾ ಮಂಡಲಿಗಳು ಮಹಿಳೆಯರ ಬದುಕಿಗೆ ಮಾರ್ಗದರ್ಶನ ನೀಡಲು ಯಾವ ರೀತಿಯ ಸಹಕಾರ ಮಾಡುತ್ತಿವೆ. ವಿವರಗಳನ್ನು ಒದಗಿಸುವುದು.

ಶ್ರೀಮತಿ ಬಿ.ಟಿ. ಲಲಿತಾ ನಾಯಕ್ (ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವರು)

ಅ. ಮಹಿಳಾ ಮಂಡಲಿಗಳು ಮಹಿಳೆಯರನ್ನು ಸಂಘಟಿಸಿ ಸಾಮಾಜಿಕ ಮತ್ತು ಆರ್ಥಿಕ ಗ್ರಾಮೀಣ ಅಭಿವೃದ್ಧಿ ಕಾರ್ಯಕ್ರಮಗಳಲ್ಲಿ ಅವರು ಸಕ್ರಿಯವಾಗಿ ಪಾಲ್ಗೊಂಡು ಕಾರ್ಯಪ್ರವೃತ್ತರಾಗುವಂತೆ ಪ್ರೋತ್ಸಾಹಿಸಿ ಮಾರ್ಗದರ್ಶನ ನೀಡುತ್ತಿದೆ.

ವಿಷಯ : ಕನ್ನಡ ಬಾಷೆಯನ್ನು ಕಡ್ಡಾಯ ಮಾಡುವುದರ ಬಗ್ಗೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 728(530)

ಶ್ರೀ ಕೆ.ಎಸ್. ಪುಟ್ಟಣ್ಣಯ್ಯ (ಪಾಂಡವಪುರ) : ಮಾನ್ಯ ಕನ್ನಡ ಮತ್ತು ಸಂಸ್ಕೃತ ಮಹಿಳಾ ಮತ್ತು ಮಕ್ಕಳ ಕಲ್ಯಾಣ ರಾಜ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ

ಅ. ಕನ್ನಡ ಬಾಷೆಯನ್ನು ಎಲ್ಲಾ ಹಂತದಲ್ಲೂ ಕಡ್ಡಾಯ ಮಾಡುವುದರ ಬಗ್ಗೆ ಸರ್ಕಾರದ ನಿಲುವೇನು?

ಆ. ಸರೋಜಿನಿ ಮಹಿಷಿ ವರದಿಯನ್ನು ಜಾರಿಗೆ ತರಲು ಸರ್ಕಾರದ ನಿಲುವೇನು?